**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ. 583/2023**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ತಿಪ್ಪಣ್ಣ ಪಾರಕ್ಕನವರ | ಡಿಡಬ್ಲ್ಯೂ | 1 |
| ತಂದೆಃಗಂಡನ ಹೆಸರು | : | ಫಕ್ಕಿರಪ್ಪ | | |
| ವಯಸ್ಸು | : | 40 ವರ್ಷ | | |
| ಉದ್ಯೋಗ | : | ಕೂಲಿ | | |
| ವಾಸ ಸ್ಥಳ | : | ಹಾನಗಲ್ | | |

**ದಿನಾಂಕ: 26.12.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ**

ನಾನು ಹಾನಗಲ್ ನಲ್ಲಿರುವ ಸ್ವಾತಿ ಸಾರೀಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ದೂರುದಾರರಾದ ರಾಮಚಂದ್ರ ನಾಗಪ್ಪ ಕಬ್ಬೂರ ರವರು ಸದರಿ ಅಂಗಡಿಯ ಮಾಲೀಕರಾದ ಪರಮೇಶ ತಿಪ್ಪಣ್ಣ ಸಿದ್ದೋಜಿ ರವರ ಕಡೆಗೆ ಆಗಾಗ ಬರುತ್ತಿದ್ದರಿಂದ ಸದರಿ ದೂರುದಾರ ನನಗೆ ಪರಿಚಯ ಆಗಿದ್ದರು. ದೂರುದಾರ ನನ್ನೊಂದಿಗೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲ. ನಾನು ದೂರುದಾರನಿಗೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಚೆಕ್ ನೀಡಿಲ್ಲ. ಈ ಪ್ರಕರಣದಲ್ಲಿ ನಮೂದಿಸಿದ ನಿಪಿ-1 ಚೆಕ್ ನನಗೆ ಸಂಬಂಧಿಸಿದ ಚೆಕ್ ಅಲ್ಲ. ಸದರಿ ನಿಪಿ-1 ರ ಚೆಕ್ ಮೇಲೆ ನಾನು ಸಹಿ ಮಾಡಿಲ್ಲ.

2023 ನೇ ಸಾಲಿನಲ್ಲಿ ನನಗೆ ದೂರುದಾರ ನೀಡಿದ ನೋಟಿಸು ತಲುಪಿದ್ದು ನಾನು ತಕ್ಷಣ ಸಿಂಡಿಕೇಟ್ ಬ್ಯಾಂಕ್ ಗೆಜ್ಜಿಹಳ್ಳಿ ಶಾಖೆಯ ಮ್ಯಾನೇಜರ ರವರ ಬಳಿ ಸದರಿ ನಿಪಿ-1 ರ ಚೆಕ್ ಗೆ ಸಂಬಂಧಿಸಿದಂತೆ ವಿಚಾರಣೆ ಮಾಡಲಾಗಿ ಸದರಿ ಬ್ಯಾಂಕಿನವರು ನಿಪಿ-1 ಚೆಕ್ ನನಗೆ ಸಂಬಂಧಿಸಿದ್ದಲ್ಲ ಎಂದು ತಿಳಿಸಿದರು. ಸದರಿ ಚೆಕ್ ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ನಾನು ದೂರುದಾರನಿಗೆ ಯಾವುದೇ ರೀತಿಯ ಚೆಕ್ ನೀಡಿಲ್ಲ. ನಾನು ಆತನೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ. ಆತ ನನಗೆ ಯಾವುದೇ ಹಣ ನೀಡಿಲ್ಲ. ಆ ದೂರುದಾರ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾನೆ.

ಸಾಕ್ಷಿ ಬ್ಯಾಂಕ್ ಗೆ ಸಂಬಂಧಿಸಿದ ಸುತ್ತೋಲೆ ಸಂಖ್ಯೆ 2598/2021-2022 ರ ದೃಡೀಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-1 ಎಂದು, ಅದೇ ರೀತಿ ಸದರಿ ನಿಡಿ-1 ಕ್ಕೆ ಲಗತ್ತಿರುವ ಅನೆಕ್ಚರ್ 1 ಮತ್ತು 2 ನ್ನು ಒಟ್ಟಾರೆಯಾಗಿ ನಿಡಿ-2 ಎಂದು, ದಿನಾಂಕ 26.04.2019 ರ ನೋಟಿಫಿಕೇಶನ್ ನ್ನು ನಿಡಿ-3 ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಆರೋಪಿ ಪರ ವಕೀಲರು ಕೆನರಾ ಬ್ಯಾಂಕ್ ಗೆಜ್ಜಹಳ್ಳಿ ಶಾಖೆಯ ಖಾತೆ ಸಂಖ್ಯೆ:123514000000151 ನೇದ್ದಕ್ಕೆ ಸಂಬಂದಿಚಿಸಿದ ದಿನಾಂಕ 07.09.2024 ರಿಂದ 06.09.2025 ರವರೆಗಿನ ಖಾತಾ ಪುಸ್ತಕದ ಆನ್ ಲೈನ್ ಪ್ರತಿಯನ್ನು ಗುರುತಿಸಲು ಕೋರಿಕೊಂಡಿದ್ದು ದೂರುದಾರರ ಪರ ವಕೀಲರು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ಪ್ರಮಾಣ ಪತ್ರ ಒದಗಿಸದೇ ಇರುವುದರಿಂದ ಸದರಿ ಅಕೌಂಟ್ ಎಕ್ಸಟ್ರ್ಯಾಕ್ಟ ನ್ನು ಗುರುತಿಸಲು ಬರುವುದಿಲ್ಲ ಎಂದು ತಕರಾರು ಸಲ್ಲಿಸಿದ್ದರಿಂದ ಆ ಬಗ್ಗೆ ಸುನಾವಣೆಗಾಗಿ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ